## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 799 |
| ಸದಸ್ಯರು ಹೆಸರು | : | ಶ್ರೀ ಎಂ.ಎಲ್ ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

**ಅ)** ರಾಜ್ಯದ ನಗರಸಭೆ , ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಮಂಜೂರಾದ /ಕಾರ್ಯ ನಿರ್ವಹಿಸುತ್ತಿರುವ / ಖಾಲಿಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ಹುದ್ದೆವಾರು ಸಂಪೂರ್ಣವಾದ ಮಾಹಿತಿ ನೀಡುವುದು)

ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ಜಿಲ್ಲಾವಾರು, ಹುದ್ದೆವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

**ಆ)** ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು; ಈ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಯಾವ ಕ್ರಮವಹಿಸಲಾಗಿದೆ (ಸಂಪೂರ್ಣವಾದ ಮಾಹಿತಿ ನೀಡುವುದು)

**ಇ)** ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿದ್ದಲ್ಲಿ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಕಾಮಗಾರಿಗಳ ಅನುಷ್ಠಾನ, ಅಭಿವೃದ್ಧಿಯನ್ನು ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ (ಸಂಪೂರ್ಣವಾದ ಮಾಹಿತಿ ನೀಡುವುದು)

ಕೋಲಾರ ಜಿಲ್ಲೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ನಗರಸ್ಥಳೀಯ ಸಂಸ್ಥೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾದ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ನಗರಸ್ಥಳೀಯ ಸಂಸ್ಥೆಯಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕರ್ತವ್ಯನಿರ್ವಹಿಸುತ್ತಿರುವಖಾಯಂಅಧಿಕಾರಿ/ನೌಕರರ ಸಂಖ್ಯೆ | ಖಾಲಿ ಹುದ್ದೆಗಳಸಂಖ್ಯೆ | ಗುತ್ತಿಗೆ/ ಹೊರಗುತ್ತಿಗೆ/ ನೇರಪಾವತಿ /ದಿನಗೂಲಿ/ ಕ್ಷೇಮಾಭಿವೃದ್ಧಿ ಅಧಿಕರ್ತವ್ಯನಿರ್ವಹಿಸುತ್ತಿರುವ ನೌಕರರಸಂಖ್ಯೆ |
|---|---|---|---|---|---|
| **ಕೋಲಾರಜಿಲ್ಲೆ** | | | | | |
| 1 | ಕೋಲಾರ ನಗರಸಭೆ | 418 | 140 | 278 | 147 |
| 2 | ಕೆಜಿಎಫ್ ನಗರಸಭೆ | 418 | 122 | 296 | 27 |
| 3 | ಮುಳಬಾಗಿಲು ನಗರಸಭೆ | 236 | 75 | 161 | 110 |
| 4 | ಬಂಗಾರ ಪೇಟೆ ಪುರಸಭೆ | 97 | 90 | 7 | 62 |
| 5 | ಮಾಲೂರು ಪುರಸಭೆ | 97 | 58 | 39 | 85 |
| 6 | ಶ್ರೀನಿವಾಸ ಪುರಪುರಸಭೆ | 97 | 44 | 53 | 34 |
| 7 | ವೇಮಗಲ್ – ಕುರುಗಲ್ ಪಟ್ಟಣ ಪಂಚಾಯಿತಿ | 40 | 4 | 36 | 48 |
| | ಒಟ್ಟು | 1403 | 533 | 870 | 513 |
| **ಚಿಕ್ಕಬಳ್ಳಾಪುರಜಿಲ್ಲೆ** | | | | | |
| 1 | ಚಿಕ್ಕಬಳ್ಳಾಪುರನಗರಸಭೆ | 236 | 76 | 160 | 154 |

..2



File No. UDD/49/LCQ/2024-MADMN-Urban Development Department (Computer No. 1465513)
Generated from eOffice by PRAKASH P, UDD-ASST(PP), ASSISTANT, URBAN DEVELOPMENT DEPARTMENT on 16/06/2025 06:00 PM

| | | | | | |
|---|---|---|---|---|---|
| 2 | ಚಿಂತಾಮಣಿ ನಗರಸಭೆ | 236 | 81 | 155 | 93 |
| 3 | ಶಿಡ್ಲಘಟ್ಟ ನಗರಸಭೆ | 236 | 75 | 161 | 45 |
| 4 | ಗೌರಿಬಿದನೂರು ನಗರಸಭೆ | 236 | 72 | 164 | 56 |
| 5 | ಬಾಗೇಪಲ್ಲಿ ಪುರಸಭೆ | 97 | 46 | 51 | 33 |
| 6 | ಗುಡಿಬಂಡಿ ಪಟ್ಟಣ ಪಂಚಾಯಿತಿ | 40 | 21 | 19 | 20 |
| | ಒಟ್ಟು | 1081 | 371 | 710 | 401 |

ಕರ್ನಾಟಕ ಲೋಕಸೇವಾ ಆಯೋಗದಿಂದ ನಗರ ಸ್ಥಳೀಯ ಸಂಸ್ಥೆಗಳ ವಿವಿಧ ವೃಂದದ ಒಟ್ಟು 355 ಹುದ್ದೆಗಳಿಗೆ ಅಂತಿಮ ಆಯ್ಕೆಪಟ್ಟಿ ಸ್ವೀಕೃತವಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದ್ದು ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ನಗರಸ್ಥಳೀಯ ಸಂಸ್ಥೆಯಲ್ಲಿನ ನೇರ ನೇಮಕಾತಿ ಅಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮ ವಹಿಸಲಾಗುವುದು.

ಮುಂಬಡ್ತಿ ಕೋಟಾದಡಿ ಗ್ರೂಪ್-ಎ ವೃಂದದ ಹುದ್ದೆಗಳಲ್ಲಿ ಖಾಲಿಯಾಗುವ ಹುದ್ದೆಗಳನ್ನು ಸರ್ಕಾರದ ಹಂತದಲ್ಲಿ ಹಾಗೂ ಗ್ರೂಪ್-ಬಿ ಮತ್ತು ಸಿ ವೃಂದದ ಲೆಕ್ಕಾಧೀಕ್ಷಕರು, ಸಮುದಾಯ ಸಂಘಟನಾಧಿಕಾರಿ, ಕಛೇರಿ ವ್ಯವಸ್ಥಾಪಕರು, ಕಂದಾಯಾಧಿಕಾರಿ, ಮುಖ್ಯಾಧಿಕಾರಿ ಶ್ರೇಣಿ-II, ಅಕೌಂಟೆಂಟ್, ಕಿರಿಯ ಅಭಿಯಂತರರು, ಹಿರಿಯ ಆರೋಗ್ಯ ನಿರೀಕ್ಷಕರ ಹುದ್ದೆಗಳಲ್ಲಿ ಖಾಲಿ ಯಾಗುವ ಹುದ್ದೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಕಾಲಕಾಲಕ್ಕೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಮುಂದುವರೆದು, ಡಿ ವೃಂದದ ಹುದ್ದೆಗಳಲ್ಲಿ ಪೌರ ಕಾರ್ಮಿಕರು, ಲೋಡರ ಮತ್ತು ಕ್ಲೀನರ ಹುದ್ದೆಗಳನ್ನು ಭರ್ತಿ ಮಾಡಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ ಹಾಗೂ ಜಿಲ್ಲಾ ಮಟ್ಟದಲ್ಲಿ ಮುಂಬಡ್ತಿ ಖೋಟಾದಡಿಯಲ್ಲಿ ವಿವಿಧ "ಸಿ" ವೃಂದದ ಪ್ರಥಮ ದರ್ಜೆಸಹಾಯಕರು, ಪ್ರಥಮ ದರ್ಜೆಕಂದಾಯ ನಿರೀಕ್ಷಕರು, ದ್ವಿತೀಯ ದರ್ಜೆಸಹಾಯಕರು, ಕರವಸೂಲಿಗಾರರು, ವಾಹನ ಚಾಲಕರು, ಎಲೆಕ್ಟ್ರೀಷಿಯನ್ ಗ್ರೇಡ್-II, ನೀರು ಸರಬರಾಜು ಸಹಾಯಕರು, ಲ್ಯಾಬ್ ಟೆಕ್ನಿಷಿಯನ್ ಹಾಗೂ ತತ್ಸಮಾನ ಹುದ್ದೆಗಳ ಮುಂಬಡ್ತಿ ನೀಡುವುದಕ್ಕೆ ಸಂಬಂಧಿಸಿದಂತೆ ನಿರ್ದೇಶನಾಲಯದ ಪತ್ರಸಂಖ್ಯೆ: ಇ-243772 ಡಿಎಂಎಇಎಸ್ ಟಿ2ಎಸ್‌ಡಿಎ 32020 ದಿನಾಂಕ 05.08.2020ರಲ್ಲಿ ಖಾಲಿ ಇರುವ ಹುದ್ದೆಗಳನ್ನು ನಿಯಮನುಸಾರ ಭರ್ತಿಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದ್ದು ಜಿಲ್ಲಾಧಿಕಾರಿಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ: ನಅಇ 49 ಎಲ್‌ಎಕ್ಯೂ 2024**

**(ರಹೀಂ ಖಾನ್)**
**ಪೌರಾಡಳಿತ ಮತ್ತು ಹಜ್ ಸಚಿವರು**



File No. UDD/49/LCQ/2024-MADMN-Urban Development Department (Computer No. 1465513)
Generated from eOffice by PRAKASH B, UDD-ASST(PR), ASSISTANT, URBAN DEVELOPMENT DEPARTMENT on 16/06/2025 06:00 PM